**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ.ನಂ.807/2014**

ಸಾಕ್ಷಿಯ ಹೆಸರು :- ಕೆ ಎಸ್ ಕಿಶೋರ್
ತಂದೆ/ಗಂಡನ ಹೆಸರು :- ಶ್ರೀನಿವಾಸನ್ ಜೆ ಸಿ
ವಯಸ್ಸು :- 51 ವರ್ಷ
ಉದ್ಯೋಗ :- ಎಕ್ಸಿಕ್ಯೂಟಿವ್ ಇಂಜಿನಿಯರ್
ವಾಸಸ್ಥಳ :- ಮೈಸೂರು

(ಸಾಕ್ಷಿಗೆ ದಿನಾಂಕ: **12.08.2022** ರಂದು ಪ್ರಮಾಣ ವಚನ ಬೋಧಿಸಲಾಯಿತು)

ಸಿಡಬ್ಲ್ಯೂ 19 ಪಿಡಬ್ಲ್ಯೂ .5

**ಮುಖ್ಯ ವಿಚಾರಣೆ:- ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದ**

ನಾನು ಫೆಬ್ರವರಿ-2011 ರಿಂದ ಆಗಸ್ಟ್-2013 ರವರೆಗೆ ಮದ್ದೂರು ನಂ:1 ಸಬ್ ಡಿವಿಷನ್ ಸೆಸ್ಕಾಂ ನಲ್ಲಿ ಎ ಇ ಇ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:01.04.2013 ರಂದು ಗೆಜ್ಜಲಗೆರೆ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ನೀಡಲು ಆಗುತ್ತಿಲ್ಲ ಎಂದು ಚಾಸಾ-18 ರವರು ನನಗೆ ತಿಳಿಸಿರುತ್ತಾರೆ. ಯಾವಾ ಉದ್ದೇಶಕ್ಕೆ ವಿದ್ಯುತ್ ಸಂಪರ್ಕ ನೀಡಲು ಆಗುತ್ತಿಲ್ಲ ಎಂದು ನಾನು ಚಾಸಾ-18 ರವರನ್ನು ಕೇಳಿರುತ್ತೇನೆ. ಚಾಸಾ-18 ರವರು ಗೆಜ್ಜಲಗೆರೆ ಕಡೆ ಹೋಗುವ ಲೈನಿನ ಜಂಪ್ ನ್ನು ತೆಗೆದಿರುತ್ತಾರೆಂದು ತಿಳಿಸಿರುತ್ತಾರೆ. ವಾಪಸ್ ಜಂಪ್ ನ್ನು ಹಾಕಿ ಎಂದು ಹೇಳಿದಾಗ, ಚಾಸಾ-18 ರವರು ಜನರು ಜಂಪ್ ಹಾಕಲು ಬಿಡುತ್ತಿಲ್ಲ ಎಂದು ತಿಳಿಸಿರುತ್ತಾರೆ. ನಾನು ಮಧ್ಯಾಹ್ನ 02-00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ಚಾಸಾ-1 ರವರ ಬಳಿ ವಿದ್ಯುತ್ ಸಂಪರ್ಕ ನೀಡಲು ಆಗುತ್ತಿಲ್ಲ ಎಂದು ತಿಳಿಸಿರುತ್ತೇನೆ. ನಾನು, ಚಾಸಾ-18, 20, 21, 1 ಮತ್ತು ಅವರ ಸಿಬ್ಬಂದಿಗಳು ವಳಗೆರೆ ಹಳ್ಳಿ ಮತು ಗೆಜ್ಜಲಗೆರೆ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಹೋಗುವ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಜಂಪ್ ನ್ನು ಹಾಕಲು ಪುನಃ ಪ್ರಯತ್ನ ಪಟ್ಟಿರುತ್ತೇವೆ. ಅಲ್ಲಿಯಿದ್ದ ಸುಮಾರು ಜನರು ಜಂಪ್ ನ್ನು ಹಾಕಲು ಬಿಟ್ಟಿರುವುದಿಲ್ಲ. ನಿಮಗೆ ಯಾವುದೇ ತೊಂದರೆ ಆಗದಂತೆ ಗೆಜ್ಜಲಗೆರೆಗೆ ವಿದ್ಯುತ್ ಸಂಪರ್ಕ ನೀಡುತ್ತೇವೆಂದು ನಾನು ಮತ್ತು ಚಾಸಾ-1 ರವರು ತಿಳಿಸಿರುತ್ತಾರೆ. ವಳಗೆರೆಹಳ್ಳಿ ಗ್ರಾಮದ ಜನರು ನಮಗೆ ಜಂಪ್ ಹಾಕಲು ಬಿಟ್ಟಿರುವುದಿಲ್ಲ. ಸಾಕಷ್ಟು ಭಾರಿ ಅವರ ಜೊತೆ ಮಾತನಾಡಿ ಮನಹೊಲಿಸಲು ಪ್ರಯತ್ನ ಪಟ್ಟಿರುತ್ತೇವೆ. ನಂತರ ಅವರುಗಳು ಜಂಪ್ ಹಾಕಲು ಒಪ್ಪಿರುವುದಿಲ್ಲ. ಪುನಃ ಜಂಪ್ ಹಾಕಲು ಚಾಸಾ-20

ರವರಿಗೆ ಹೇಳಿದ್ದು, ನಂತರ ಜನರು ಗಲಾಟೆ ಮಾಡಲು ಶುರುಮಾಡಿರುತ್ತಾರೆ. ಪರಿಸ್ಥಿತಿ ಬಿಗಡಾಯಿಸಿದ್ದಕ್ಕೆ ಚಾಸಾ-1 ರವರು ನಮ್ಮನ್ನು ವಾಪಸ್ ಬರುವಂತೆ ಹೇಳಿರುತ್ತಾರೆ. ನಾವು ಜೀಪನ್ನು ಹತ್ತಿಕೊಂಡು ಪೊಲೀಸ್ ಠಾಣೆಗೆ ಬಂದಿರುತ್ತೇವೆ. ಅಲ್ಲಿ ಗಲಾಟೆಯಾಗಿದೆ ಎಂದು ನಮಗೆ ನಂತರ ಗೊತ್ತಾಗಿರುತ್ತದೆ. ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ ರವರು, ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದಃ-</u>**

1. ಪರಿಸ್ಥಿತಿ ಬಿಗಡಾಯಿಸಿದಾಗ ಚಾಸಾ-*1* ರವರು ಇಲಾಖೆಯ ಉನ್ನತ ಅಧಿಕಾರಿಗಳಿಗೆ ವೈರಲೆಸ್ ಮತ್ತು ದೂರವಾಣಿ ಮುಖಾಂತರ ಹೆಚ್ಚಿನ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ರಕ್ಷಣೆ ಮತ್ತು ಸೂಕ್ತ ಕ್ರಮ ಸಂಬಂಧ ಕಳುಹಿಸಿಕೊಡಲು ಕೋರಿದ್ದರಿಂದ ಸ್ಥಳಕ್ಕೆ ಅಪರ್ ಪೊಲೀಸ್ ಅಧೀಕ್ಷಕರು ಮಂಡ್ಯ ಜಿಲ್ಲೆ ಹಾಗೂ ತಮ್ಮ ಜೊತೆ ಮಳವಳ್ಳಿ ಉಪಅಧೀಕ್ಷಕರು, ವೃತ್ತ ನಿರೀಕ್ಷಕರುಗಳು, ಪಿ ಎಸ್ ಐ ರವರುಗಳು ಮತ್ತು ಜಿಲ್ಲಾ ಸಶಸ್ತ್ರ ಪಡೆಯ ಮೂರು ತುಕಡಿಗಳೊಂದಿಗೆ ಅಲ್ಲಿಗೆ ಬಂದಿರುತ್ತಾರೆ ಎಂದರೆ ಸರಿ. ನಂತರ ಅವರು ಅಲ್ಲಿದ್ದ ಗ್ರಾಮಸ್ಥರಿಗೆ ಅಧಿಕಾರಿಗಳಿಗೆ ಕರ್ತವ್ಯ ಚ್ಯುತಿ ಉಂಟುಮಾಡಬೇಡಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಮತ್ತು ನಿಮ್ಮ ಸಮಸ್ಯೆಗಳನ್ನು ಹೇಗಾದರೂ ಪರಿಹರಿಸೋಣ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ವಳಗೆರೆಹಳ್ಳಿ ಗ್ರಾಮದ ಜನರ ಮುಖಂಡತ್ವ ವಹಿಸಿದ ಆರ್ ವಿ ಅಭಿನಂದನ್, ವಿ ಸಿ ಕೃಷ್ಣ, ವಿ ಎಂ ವೆಂಕಟೇಶ್, ವಿ ಕೆ ಪ್ರಕಾಶ್, ಕೆ ಬಿ ಪುಟ್ಟಸ್ವಾಮಿ, ವಿ ಎಂ ರಮೇಶ್, ಶೇಖರ್, ಮುತ್ತುರಾಜು, ರಾಮು, ಚಂದ್ರು, ಮಾಯಿಗೌಡ, ಕುಮಾರ್, ಆಲೋಕ, ಕುಮಾರ್ ಬಿನ್ ಶ್ರೀನಿವಾಸ, ಸೀನಪ್ಪ, ಶ್ರೀನಿವಾಸ, ವಿ ಎನ್ ಮುತ್ತುರಾಜು, ವಿಜಯ್, ರಮೇಶ್, ರಮೇಶ್ ಉಃ ರೂಪೇಶ್, ಮನೋಜ್, ಕಿರಣ್ ಕುಮಾರ, ಕೆ ಆರ್ ನವೀನ್ ಕುಮಾರ್, ಶರತ್, ಕೃಷ್ಣ, ಸತೀಶ್, ಆನಂದ, ಪ್ರಸನ್ನ, ಮಹೇಶ್, ಶ್ರೀಧರ್, ರಾಮು, ಶ್ರೀಧರ್, ಸೋಮಸುಂದರ,

ದಯಾನಂದ, ತಿಮ್ಮೇಗೌಡ, ಶ್ರೀನಿವಾಸ, ನಾಗೇಗೌಡ, ಜಯಶಂಕರ, ಸಂತೋಷ, ನಿಂಗರಾಜು, ವಿನಯ್ ಕುಮಾರ , ವಿ ಸಿ ಉಮಾಶಂಕರ, ಯೋಗಾನಂದ, ವಿ ಎಂ ರಮೇಶ್, ಗಿರೀಶ್, ಪ್ರಸನ್ನ ಕುಮಾರ್, ಕೃಷ್ಣಪ್ಪ ಹಾಗೂ ಇತರೇ *150-200* ಜನರು ನಮ್ಮ ಸೂಚನೆಯನ್ನು ತಿರಸ್ಕರಿಸಿ ಯಾವುದೇ ಕಾರಣಕ್ಕೂ ವಿದ್ಯುತ್ ಸರಬರಾಜು ವ್ಯವಸ್ಥೆ ಸರಿಪಡಿಸಲು ಬಿಡುವುದಿಲ್ಲ ಎಂದು ಕೂಗಾಡಿರುತ್ತಾರೆಂದರೆ ಸರಿ. ಅವರುಗಳು ನಮಗೆ ಮತ್ತು ಪೊಲೀಸ್ ಸಿಬ್ಬಂದಿಗಳಿಗೆ ಧಿಕ್ಕಾರ ಕೂಗಿರುತ್ತಾರೆಂದರೆ ಸರಿ. ಕೈಯಲ್ಲಿ ಅವರುಗಳು ಅಕ್ರಮವಾಗಿ ಕಲ್ಲುಗಳನ್ನು ಹಿಡಿದು, ಅಕ್ರಮ ಗುಂಪು ಕಟ್ಟಿಕೊಂಡು, ನಮ್ಮ ಮೇಲೆ ಮತ್ತು ಪೊಲೀಸ್ ಇಲಾಖೆಯ ವಾಹನಗಳ ಮೇಲೆ ಕಲ್ಲನ್ನು ತೂರಿದರು ಎಂದರೆ ಸಾಕ್ಷಿಯು ನಾನು ಇದ್ದಾಗ ಕಲ್ಲನ್ನು ತೂರಿರುವುದಿಲ್ಲ ಎಂದು ನುಡಿಯುತ್ತಾರೆ. ಅವರುಗಳು ನಮ್ಮ ಮತ್ತು ಪೊಲೀಸ್ ಇಲಾಖೆಯ ವಾಹನಗಳಿಗೆ ಬೆಂಕಿ ಹಚ್ಚಲು ಮುಂದಾಗಿರುತ್ತಾರೆ ಎಂದರೆ ಸರಿ. ಇದರಿಂದ ಸಿಬ್ಬಂದಿಗಳು ಮತ್ತು ಪೊಲೀಸ್ ಅಧಿಕಾರಿಗಳಿಗೆ ಗಾಯಗಳಾಗಿವೆ ಎಂದರೆ ಸಾಕ್ಷಿಯು ನನಗೆ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಪೊಲೀಸ್ ವಾಹನಗಳಿಗೆ ಜಖಂ ಉಂಟಾದವು ಎಂದರೆ ಸಾಕ್ಷಿಯು ನನಗೆ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಂತರ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕೃತ್ಯದಲ್ಲಿ ತೊಡಗಿದ ಆರೋಪಿಗಳನ್ನು ಸುತ್ತುವರೆದು ಕನಿಷ್ಠ ಬಲಪ್ರಯೋಗ ಮಾಡಿ ಆರೋಪಿಗಳನ್ನು ಸಂಜೆ 06-30 ಕ್ಕೆ ವಶಕ್ಕೆ ತೆಗೆದುಕೊಂಡು ಮದ್ದೂರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿತರನ್ನು ನೋಡಿರುತ್ತೇನೆ. ನನಗೆ ಅವರುಗಳ ಹೆಸರನ್ನು ಹೇಳಲು ಆಗುವುದಿಲ್ಲ. ಸುಮಾರು 9 ವರ್ಷಗಳಾಗಿರುವುದರಿಂದ ಆರೋಪಿತರ ಹೆಸರನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆಯಿರುವ ಕಲ್ಲನ್ನೇ ಆ ದಿನ ಆರೋಪಿಗಳು ನಮ್ಮ ಮೇಲೆ ಮತ್ತು ಪೊಲೀಸ್ ಅಧಿಕಾರಿಗಳ ಮೇಲೆ ತೂರಿರುತ್ತಾರೆಂದರೆ ಸಾಕ್ಷಿಯು ನಾವು ಮೊದಲೇ ಹೋರಟು ಬಂದಿದ್ದು ಯಾವಾ ಕಲ್ಲನ್ನು ತೂರಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆಯಿರುವ ಗಾಜಿನ ಚೂರು ಆ ದಿನ ಆರೋಪಿಗಳು ಹೊಡೆದು ಹಾಕಿದ್ದ ಪೊಲೀಸ್ ವಾಹನಗಳ ಗಾಜಿನ ಚೂರು ಎಂದರೆ ಸಾಕ್ಷಿಯು ನನಗೆ ನಂತರ ಗೊತ್ತಾಗಿದ್ದರಿಂದ ಸದರಿ ಗಾಜಿನ ಚೂರು ಯಾವುದು ಎಂದು ನನಗೆ ಹೇಳಲು ಆಗವುವುದಿಲ್ಲ ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದೆಯಿರುವ ಕಲ್ಲುಗಳಿಂದ ನಮಗೆ ಮತ್ತು ಪೊಲೀಸರ ಮೇಲೆ ತೂರಾಟ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ

ಸರಿಯಲ್ಲ. ಪೊಲೀಸರ ವಾಹನ ಜಖಂಗೊಂಡು ನ್ಯಾಯಾಲಯದ ಮುಂದೆಯಿರುವ ಗಾಜಿನ ಚೂರು ಹೊಡೆದಿರುವ ಬಗ್ಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಸಿ ಆರ್ ವಕೀಲರ ವರಿಂದಃ-</u>**

**<u>1.</u>** ಗಲಾಟೆಯಾದ ಸ್ಥಳಕ್ಕೆ ನಾನು ಆ ಮೊದಲು ಹೋಗಿರಲಿಲ್ಲ. ವಿದ್ಯುತ್ ಸಂಪರ್ಕ ವನ್ನು ನೀಡಲು ಆಗುತ್ತಿಲ್ಲ ಎಂದು ಚಾಸಾ-18 ರವರು ನನಗೆ ತಿಳಿಸಿರುತ್ತಾರೆ. ಚಾಸಾ-18 ರವರಿಗೆ ಈ ವಿಚಾರ ಯಾವಾ ಮೂಲಕವಾಗಿ ತಿಳಿದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ-18 ರವರಿಗೆ ಎಷ್ಟು ದಿನಗಳ ಮುಂಚಿತವಾಗಿ ಜಂಪ್ ಹಾಕಲು ಬಿಟ್ಟಿರಲಿಲ್ಲ ಎಂದರೆ ಸಾಕ್ಷಿಯು ಆ ದಿನವೇ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋದಾಗ ದೂರನ್ನು ನೀಡಿರುತ್ತೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ದಿಃ01.04.2013 ರಂದು ನಮ್ಮ ಜೀಪಿನಲ್ಲಿ, ನಾನು, ಚಾಸಾ-*18, 20, 21* ರವರು ಸ್ಥಳಕ್ಕೆ ಹೋಗಿರುತ್ತೇವೆ. ಪೊಲೀಸ್ ಇಲಾಖಾ ಜೀಪಿನಲ್ಲಿ ಚಾಸಾ-*1* ರವರು ಬಂದಿರುತ್ತಾರೆ. ನಾನು ಹೋದ ಎಷ್ಟು ಸಮಯದ ನಂತರ ಚಾಸಾ-*1* ರವರು ಬಂದಿರುತ್ತಾರೆಂದು ನನಗೆ ನೆನಪಿಲ್ಲ. ನಾವು ಸ್ಥಳಕ್ಕೆ ಹೋಗುವ ಮೊದಲೇ ನಮ್ಮ ಸಿಬ್ಬಂದಿಗಳು ಯಾರಾದರೂ ಮೊದಲು ಬಂದಿದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ಜನರು ಸೇರಿದ್ದರು. ಅಲ್ಲಿ ಸೇರಿದ್ದ ಜನರು ಯಾವಾ ಗ್ರಾಮದವರು ಎಂದು ನಾನು ಕೇಳಿದಾಗ ಚಾಸಾ-*18* ರವರು ಅವರೆಲ್ಲಾ ವಳಗೆರೆಹಳ್ಳಿ ಗ್ರಾಮದವರು ಎಂದು ತಿಳಿಸಿರುತ್ತಾರೆ. ನನಗೆ ಖುದ್ದಾಗಿ ಅವರೆಲ್ಲಾ ಯಾವಾ ಊರಿನವರು ಎಂದು ಗೊತ್ತಿಲ್ಲ. ಗೆಜ್ಜಲಗೆರೆ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ನೀಡಲು ಆಗುತ್ತಿಲ್ಲ ಎಂದು ಚಾಸಾ-*18* ರವರು ನನಗೆ ತಿಳಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಿಬ್ಬಂದಿಗಳು ಸ್ಥಳಕ್ಕೆ ಹೋಗಿರುತ್ತೆವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-*20, 21* ರವರ ಮೂಲಕ ಪ್ರಯತ್ನಪಟ್ಟರು ಜನರು ಬಿಡುತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ಪೊಲೀಸ್ಅಧಿಕಾರಿಗಳು ಆರೋಪಿತರ ಮನವೊಲಿಸಿ ಜಂಪ್ ನ್ನು ಹಾಕಲು ಪ್ರಯತ್ನಪಟ್ಟಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-*20* ರವರು ಜಂಪ್ ನ್ನು ಹಾಕಲು ಹೋದಾಗ ಜನರು ಗಲಾಟೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರ ಗಲಾಟೆ ಶುರುವಾಗಿ ಪರಿಸ್ಥಿತಿ ಬಿಗಡಾಯಿಸಿರುತ್ತದೆ

ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಧಿಕಾರಿಗಳು ಕರ್ತವ್ಯ ಚ್ಯುತಿ ಮಾಡಬೇಡಿ ಎಂದು ಹೇಳಿದ್ದರೂ ಸಹ ಜನರು ಮಾತನ್ನು ಕೇಳಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಎಲ್ಲರ ಸೂಚನೆಯನ್ನು ಧಿಕ್ಕರಿಸಿ ಕೂಗಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ಮತ್ತು ಪೊಲೀಸ್ ಸಿಬ್ಬಂದಿಗಳಿಗೆ ಧಿಕ್ಕಾರ ಕೂಗಿರುತ್ತಾರೆ ಮತ್ತು ಬೆಂಕಿ ಹಚ್ಚಲು ಪ್ರಯತ್ನ ಪಟ್ಟಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮದ್ದೂರಿನಲ್ಲಿದ್ದಾಗ ಆರೋಪಿತರು ಸ್ವಂತ ಕೆಲಸಕ್ಕೆ ಬಂದಿದ್ದಾಗ, ಆರೋಪಿತರನ್ನು ನೋಡಿದ್ದು, ಘಟನೆ ದಿನ ನೋಡಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

(ಕಿರಣ್ ಎಸ್. ಪಿ.)

**2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಂ.ಎಫ್.ಸಿ ನ್ಯಾಯಾಧೀಶರು**

**ಮದ್ದೂರು.**